**ಓ ಎಸ್ ನಂಃ 224/2023**
**ಪಿ ಡಬ್ಲ್ಯೂ ಃ 1**

**ದಿಃ 01.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಜಿ ಆರ್ ವಕೀಲರಿಂದಃ-**

ನನ್ನ ಮದುವೆ 39 ವರ್ಷಗಳ ಹಿಂದೆ ನೆರವೇರಿರುತ್ತದೆ. ನಾನು ಮದುವೆ ಆದಾಗಿನಿಂದಲೂ ಸಹ ನನ್ನ ಗಂಡನ ಮನೆಯಲ್ಲಿಯೇ ವಾಸವಾಗಿದ್ದೇನೆ. 2 ನೇ ವಾದಿಯ ಮದುವೆ ಸುಮಾರು 30 ವರ್ಷಗಳ ಹಿಂದೆ ನೆರವೇರಿರುತ್ತದೆ. 2 ನೇ ವಾದಿಯು ಮದುವೆ ಆದಾಗಿನಿಂದಲೂ ಸಹ ಅವರ ಗಂಡನ ಮನೆಯಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ವಾದಿಗಳಾದ ನಾವಿಬ್ಬರೂ ವಾದ ಪತ್ರದ ಶೀರ್ಷಿಕೆಯಲ್ಲಿ ನಮೂದು ಮಾಡಿರುವ ವಿಳಾಸದಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ನಮ್ಮ ಮದುವೆ ಆದಾಗಿನಿಂದಲೂ ಸಹ ನಾವಿಬ್ಬರು ನಮ್ಮ ನಮ್ಮ ಗಂಡಂದಿರ ಮನೆಯಲ್ಲಿ ಹಣಕಾಸಿನ ವ್ಯವಹಾರ ಮತ್ತು ಇತರೆ ವ್ಯವಹಾರವನ್ನು ಮಾಡಿಕೊಂಡು ಬರುತ್ತಿದ್ದೇವೆ. ದಾವಾ ಸ್ವತ್ತುಗಳ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಹೇಳಲು ನನಗೆ ಬರುತ್ತದೆ. ದಾವಾ ಐಟಂ ನಂ. 1 ರ ಸ್ವತ್ತಿನ ಸರ್ವೆ ನಂ. 5/2. ಸದರಿ ಜಮೀನಿನ ದಕ್ಷಿಣದ ಕಡೆ ರಸ್ತೆ ಬರುತ್ತದೆ. ಉತ್ತರಕ್ಕೆ ರಸ್ತೆ, ಪಶ್ಚಿಮದ ಕಡೆ ರಂಗಸ್ವಾಮಯ್ಯ. ದಾವಾ ಐಟಂ ನಂ. 1 ರ ಸ್ವತ್ತು ಖಾತೆ ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿ ಗೋಪಾಲಯ್ಯ ನವರ ಹೆಸರಿನಲ್ಲಿದೆ. ಸದರಿ ವಿಚಾರದ ಬಗ್ಗೆ ನಾನು ದಾಖಲಾತಿಗಳನ್ನು ನೋಡಿದ್ದೇನೆ. ಸದರಿ ಆಸ್ತಿಯ ದಾಖಲಾತಿಗಳು ಗೋಪಾಲಯ್ಯನವರ ಹೆಸರಿನಲ್ಲಿದೆ ಅವುಗಳನ್ನು ನಾನು ನೋಡಿದ್ದೇನೆ. ಪ್ರಶ್ನೆಃ ದಾವಾ ಐಟಂ ನಂ. 1 ರ ಷೆಡ್ಯೂಲ್ ಸ್ವತ್ತಿನ ದಾಖಲಾತಿಗಳು ಗೋಪಾಲಯ್ಯನವರ ಹೆಸರಿನಲ್ಲಿವೆ ಎಂದು ತೋರಿಸಲು ಯಾವ ವರ್ಷದ ದಾಖಲಾತಿಗಳನ್ನು ನೋಡಿದ್ದೀರಿ ? ಉತ್ತರಃ ಸಾಕ್ಷಿಯು ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಮುಂಚೆ ತಮ್ಮ ಹೆಸರಿಗೆ ದಾವಾ ಐಟಂ ನಂ. 1 ರ ಸ್ವತ್ತನ್ನು ಮಾಡಿಸಿಕೊಂಡಿರುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸುತ್ತೇನೆ. ನನ್ನ ತಾತನ ಹೆಸರು ಕುಂಟಯ್ಯ. ನನ್ನ ಅಜ್ಜಿಯ ಹೆಸರು ಮುನಿಯಮ್ಮ. ನಮ್ಮ ಅಜ್ಜಿ ಮತ್ತು ತಾತನಿಗೆ 3 ಜನ ಮಕ್ಕಳು. 1) ಕಡತೂರಪ್ಪ 2) ಬಂಕಯ್ಯ 3) ಪುಟ್ಟನರಸಮ್ಮ. ತಮ್ಮ ಅಜ್ಜಿ ಮತ್ತು ತಾತನ ಮೊದಲನೆ ಮಗ ಈಗ ಜೀವಂತ ಇದ್ದಾರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ರವರ ಹೆಂಡತಿ ಹೆಸರು ವರದಮ್ಮ. ಅವರೂ ಸಹ ಈಗ ಜೀವಂತವಾಗಿರುವುದಿಲ್ಲ. ತಮ್ಮ ತಾತನ ಮೊದಲನೆ ಮಗನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 10 ಮಕ್ಕಳು ಎಂದು ನುಡಿಯುತ್ತಾರೆ. 1) ನರಸಮ್ಮ 2) ನರಸಿಂಹಯ್ಯ 3) ಮಂಜಣ್ಣ 4) ಸೀನಪ್ಪ 5) ರಾಜಣ್ಣ 6) ವೆಂಕಟೇಶ 7) ಕೃಷ್ಣ 8) ಲಕ್ಷ್ಮೀ 9) ಕೊಳಚಮ್ಮ 10) ಸಾಕಮ್ಮ. ಮೇಲ್ಕಂಡ ಮಕ್ಕಳಲ್ಲಿ ನರಸಮ್ಮ, ನರಸಿಂಹಯ್ಯ ಮತ್ತು ವಂಕಟೇಶ ರವರು ಮರಣ ಹೊಂದಿರುತ್ತಾರೆ.

**ಓ ಎಸ್ ನಂಃ 224/2023**
**ಪಿ ಡಬ್ಲ್ಯೂ ಃ 1**

ನರಸಮ್ಮನವರ ಗಂಡನ ಹೆಸರು ಶಿವಯ್ಯ, ಸದರಿ ರವರು ಸಹ ಈಗ ಜೀವಂತ ಇರುವುದಿಲ್ಲ. ನರಸಮ್ಮ ಮತ್ತು ಶಿವಯ್ಯನಿಗೆ 3 ಜನ ಮಕ್ಕಳು. 1) ಮಂಜುಳ 2) ಕಮಲ 3) ಶೀಲ. ನರಸಿಂಹರವರ ಹೆಂಡತಿಯ ಹೆಸರು ಶಾರದಮ್ಮ, ಸದರಿ ರವರು ಸಹ ಮರಣ ಹೊಂದಿರುತ್ತಾರೆ. ನರಸಿಂಹ ಮತ್ತು ಶಾರದಮ್ಮ ರವರಿಗೆ 4 ಜನ ಮಕ್ಕಳು. 1) ಶ್ರೀಮತಿ ಚಂದ್ರ 2) ರತ್ನ 3) ನಾಗೇಂದ್ರ 4) ಲಕ್ಷ್ಮೀ. ವೆಂಕಟೇಶನ ಹೆಂಡತಿಯ ಹೆಸರು ಗಂಗಮ್ಮ. ಅವರಿಬ್ಬರಿಗೆ ಒಬ್ಬನೇ ಮಗ ಇದ್ದು ಆತನ ಹೆಸರು ನವೀನ್.

**ಮುಂದುವರಿದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**